ಓ.ಎಸ್ಃ 240 /2015

ಪಿ. ಡಬ್ಲ್ಯೂ ಃ 01

**ಸಾಕ್ಷಿಗೆ ದಿನಾಂಕ 28.08.2018 ರಂದು ಪ್ರಮಾಣ ವಚನ ನೀಡಲಾಯಿತು.**

**ಮು. ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಆರ್.ಎಸ್ ವಕೀಲರಿಂದ**

ನಾನು ನಿವೇಶನ ಖರೀದಿಸಿರುವ ಶಾರದಮ್ಮ ನವರ ಗಂಡನ ಹೆಸರು ಕೃಷ್ಣಪ್ಪ ಎಂದರೆ ಹೌದು. ಸದರಿ ಶಾರದಮ್ಮ ನವರ ಹಿಂದಿನ ಮಾಲೀಕರಾದ ಲಕ್ಷ್ಮಮ್ಮ ನವರ ಗಂಡನ ಹೆಸರು ಜಿ.ಸಿ ಚನ್ನಪ್ಪ ಎಂದರೆ ಹೌದು. ಲಕ್ಷ್ಮಮ್ಮ ನವರಿಗಾಗಲೀ ಶಾರದಮ್ಮ ನವರಿಗಾಗಲೀ ಚನ್ನಬಸಪ್ಪ ಎಂಬುವವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಹೌದು. ಸಾಕ್ಷಿಯು ಪುನಃ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಮಾಡಿರುವ ನಿಪಿ 4 ರಲ್ಲಿನ ಚನ್ನಬಸಪ್ಪ ಎಂಬುವವರು ಯಾರು ಎಂದರೆ ಗೊತ್ತಿಲ್ಲ. ನಾನು ಪ್ರತಿವಾದಿ ವಿರುದ್ದ ಈ ಹಿಂದೆ ದಾವಾ ಸಲ್ಲಿಸಿದ ಸಮಯದಲ್ಲಾಗಲೀ ಅಥವಾ ಈ ದಾವೆ ಸಲ್ಲಿಸಿದ ನಂತರವಾಗಲೀ ಸದರಿ ಚನ್ನಬಸಪ್ಪ ಯಾರು ಎಂದು ನಾನು ತಿಳಿದುಕೊಂಡಿಲ್ಲ. ನಿಪಿ 4 ರಲ್ಲಿ ಪುರಸಭೆಯವರು ಚನ್ನ ಬಸಪ್ಪ ಎಂದು ಯಾವ ಕಾರಣಕ್ಕಾಗಿ ಬರೆದಿರುತ್ತಾರೆ ಎಂದು ನಾನು ವಿಚಾರಿಸಿಲ್ಲ ನನ್ನ ಯಜಮಾನರು ವಿಚಾರಿಸಿರಬಹುದು. ದಾವಾ ಆಸ್ತಿಯನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ಬೇರೆ ಯಾವುದೇ ಆಸ್ತಿಗಳು ಗಂಜಾಂ ನಲ್ಲಿ ಇವೆಯೇ ಎಂದರೆ ಒಂದು ನಿವೇಶನ ಇದೆ. ಸದರಿ ನಿವೇಶನವನ್ನು ಪುರಸಭೆಯಿಂದ ಬಡವರ ನಿವೇಶನ ಎಂದು ಪಡೆದಿರುತ್ತೇನೆ. ಅದು

ಮಂಜೂರಾಗಿ ಎಷ್ಟು ವರ್ಷಗಳು ಆಗಿರುತ್ತದೆ ಎಂದು ಗೊತ್ತಿಲ್ಲ. ಸದರಿ ನಿವೇಶನ ನನ್ನ ಹೆಸರಿನಲ್ಲಿ ಖಾತೆಯಾಗಿದೆ. ನಿವೇಶನದ ಮಂಜೂರಾತಿಗಾಗಿ ಅರ್ಜಿ ನೀಡಿರುತ್ತೇನೋ ಇಲ್ಲವೋ ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತು. ನನ್ನ ಗಂಡನೇ ಮಂಜೂರಾತಿಗಾಗಿ ಓಡಾಡಿ ಮಾಡಿಸಿಕೊಟ್ಟಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿನ ಸಹಿಯನ್ನು ಗುರುತಿಸಿದ್ದು ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಈಗ ಓದಿ ಹೇಳಿದ ದಾಖಲೆಯಲ್ಲಿನ ಪುಟ್ಟಸ್ವಾಮಿ ರವರ ಹೆಂಡತಿ ಮಂಗಳಗೌರಿ ನಾನು ಎಂದರೆ ಹೌದು. ಸದರಿ ದಾಖಲೆಯನ್ನು ನಿಡಿ 4 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆಯಂತೆ ನಿಡಿ 3 ರ ಅರ್ಜಿ ನೀಡುವ ಸಮಯದಲ್ಲಿ ಪುರಸಭೆಗೆ ನಾನು ನನ್ನ ಫೋಟೋದೊಂದಿಗೆ ಅರ್ಜಿ ನೀಡಿ ಪ್ರಮಾಣ ಪತ್ರಿಕೆ ನೀಡಿರುತ್ತೇನೆ ಎಂದರೆ ಹೌದು. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ 5 ಮತ್ತು 6 ಎಂದು ಗುರುತಿಸಲಾಯಿತು. ನಿಡಿ 3 ರಿಂದ 6 ರಲ್ಲಿನ ನಿವೇಶನವನ್ನು ನೀಡುವಾಗ ನನ್ನ ಹೆಸರಿನಲ್ಲಿ ಯಾವುದೇ ನಿವೇಶನ ಅಥವಾ ಮನೆ ಇರಲಿಲ್ಲ ಎಂದರೆ ಹೌದು. ನನಗೆ ನಿವೇಶನ ಮಂಜೂರಾದ ಸಮಯದಲ್ಲಿಯೇ ನನ್ನ ಗಂಡ ಪುಟ್ಟಸ್ವಾಮಿ ರವರಿಗೂ ಸಹಾ ಒಂದು ನಿವೇಶನ ಮಂಜೂರಾಗಿದೆ ಎಂದರೆ ಇಲ್ಲ. ಪ್ರತಿವಾದಿ ಖರೀದಿಸಿರುವ ಮನೆ ಮತ್ತು ನಿವೇಶನದ ಆಸ್ತಿಯಲ್ಲಿ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಇಲ್ಲ. ಲಕ್ಷ್ಮಮ್ಮನವರಿಗೆ ದಿನಾಂಕ 06.08.1951 ರಲ್ಲಿ ಆಕೆಯ ಗಂಡ ಚನ್ನಯ್ಯ ನವರು ಅವರಿಗೆ ಇದ್ದ ಆಸ್ತಿಗಳನ್ನು ಮರಣ ಶಾಸನ ಪತ್ರದ

ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ದಲ್ಲಾಗಲೀ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಸದರಿ ಮರಣ ಶಾಸನ ಪತ್ರದ ಬಗ್ಗೆ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನನ್ನ ಯಜಮಾನರು ಬರೆಸಿರಬಹುದು. ಈ ದಾವೆ ಮತ್ತು ಹಿಂದಿನ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನನ್ನ ಗಂಡನವರೇ ನೀಡಿದ್ದು ಅವರೇ ನೋಡಿಕೊಂಡಿರುತ್ತಾರೆ , ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ದಾವೆಯಲ್ಲಿ ಹೇಳಿರುವಂತಹ ಅನುಸೂಚಿ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಲಕ್ಷ್ಮಮ್ಮ ಮತ್ತು ಶಾರಮ್ಮನವರಿಗೆ ಪ್ರತಿವಾದಿಗೆ ಸೇರಿದ ನಿವೇಶನವನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಪ್ರತಿವಾದಿಗೆ ಸೇರಿದ ಅವರ ಮನೆಯ ಮುಂದಿನ ಜಾಗವನ್ನು ಲಪಟಾಯಿಸಲುಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ